## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 270 |
| ಸದಸ್ಯರ ಹೆಸರು | | ಶ್ರೀ ಅರುಣ ಶಹಾಪುರ |
| ಉತ್ತರಿಸಬೇಕಾದ ದಿನಾಂಕ | | 12-07-2018 |
| ಉತ್ತರಿಸಬೇಕಾದ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಪ್ರಶ್ನೆ | | ಉತ್ತರ |
| ಅ) | ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗಾಗಿ ಸರ್ಕಾರ ಈ ಹಿಂದೆ ಅಧಿಸೂಚನೆ ಹೊರಡಿಸಿದ್ದು, ಯಾವಾಗ; | ದಿನಾಂಕ:22-01-2015 ರಂದು 1298 ಹಾಗೂ ದಿನಾಂಕ:05-03-2015 ರಂದು 862 ಸಹಾಯಕ ಪ್ರಾಧ್ಯಾಪಕರ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅಧಿಸೂಚನೆಯನ್ನು ಹೊರಡಿಸಿದೆ. |
| ಆ) | ಸದರಿ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರಸ್ತುತ ಎಷ್ಟು ಜನರಿಗೆ ಆದೇಶದ ಪ್ರತಿ ನೀಡಲಾಗಿದೆ; | ಪ್ರಸ್ತುತ ಒಟ್ಟು 1905 ಅಭ್ಯರ್ಥಿಗಳಿಗೆ ಸರ್ಕಾರದಿಂದ ನೇಮಕಾತಿ ಆದೇಶವನ್ನು ನೀಡಲಾಗಿದೆ. |
| ಇ) | ಬಾಕಿ ಉಳಿದವರ ಸಂಖ್ಯೆ ಎಷ್ಟು ಹಾಗೂ ಯಾವ ಕಾರಣಕ್ಕಾಗಿ ಇವರಿಗೆ ಇನ್ನೂ ಆದೇಶ ನೀಡಲಾಗಿಲ್ಲ; | ಬಾಕಿ 104 ಅಭ್ಯರ್ಥಿಗಳಿಗೆ ಸಂಬಂಧಪಟ್ಟಂತೆ, ಅವರ ಶೈಕ್ಷಣಿಕ ದಾಖಲೆಗಳು ಮತ್ತು ಜಾತಿ ಮತ್ತು ಆದಾಯ ಪ್ರಮಾಣಪತ್ರಗಳ ಸಿಂಧುತ್ವ, ದೇಹದಾರ್ಢ್ಯತೆ ಪ್ರಮಾಣಪತ್ರ, ಪೋಲೀಸ್ ವರದಿ, ನ್ಯಾಯಾಲಯಗಳಲ್ಲಿ ಬಾಕಿಯಿರುವ ಪ್ರಕರಣಗಳು ಇತ್ಯಾದಿ ಕಾರಣಗಳಿಂದ ಅವರಿಗೆ ಇದುವರೆಗೆ ನೇಮಕಾತಿ ಆದೇಶ ನೀಡಲಾಗಿರುವುದಿಲ್ಲ. |
| ಈ) | ಈ ಕುರಿತು ಯಾವುದಾದರೂ ಸಮಿತಿ ರಚಿಸಲಾಗಿದೆಯೇ; ಈ ಸಮಿತಿಯು ನೀಡಿರುವ ವರದಿಯ ಅಂಶಗಳೇನು; (ವರದಿ ಪ್ರತಿ ನೀಡುವುದು) | ಹೌದು. ಡಾ॥ ಬಿ.ತಿಮ್ಮೇಗೌಡ, ಕುಲಪತಿಗಳು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸಲಾಗಿದೆ.<br><br>ತಜ್ಞರ ಸಮಿತಿಗೆ ಅಭಿಪ್ರಾಯಕ್ಕಾಗಿ ವಹಿಸಲಾದ ಪ್ರಕರಣಗಳಲ್ಲಿ ಅಭ್ಯರ್ಥಿಗಳ ವಿದ್ಯಾರ್ಹತೆಯು ಸರ್ಕಾರ ಆಯಾಯ ವಿಷಯಗಳಲ್ಲಿ ಬೋಧನೆ ಮಾಡಲು ಅಧಿಸೂಚನೆ ಮೂಲಕ ನಿಗದಿಪಡಿಸಿರುವ ವಿದ್ಯಾರ್ಹತೆಗೆ ಸಮಾನಾಂತರ ವಿದ್ಯಾರ್ಹತೆಯಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಆಯಾಯ ಅಭ್ಯರ್ಥಿಯನ್ನು ನೇಮಕಾತಿಗೆ ಪರಿಗಣಿಸಲು ಅವಕಾಶವಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಅದರಂತೆ ಪರಿಶೀಲಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| ಈ) | ಹಾಗಿದ್ದಲ್ಲಿ, ವಿವಿಧ ಕೋರ್ಸ್‌ಗಳಿಗೆ ಮಾನ್ಯತೆ ಪಡೆದ ಖಾಸಗಿ ವಿಶ್ವವಿದ್ಯಾಲಯಗಳ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳ ಕೋರ್ಸ್‌ಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ಉದ್ಭವಿಸುವುದಿಲ್ಲ. |
| ಇ) | ಶಾಸನ ಬದ್ಧ ಸಂಸ್ಥೆಗಳಿಂದ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಪ್ರೊಫೆಷನಲ್ ಕೋರ್ಸ್‌ಗಳಾದ ಇಂಜಿನಿಯರಿಂಗ್, ಮ್ಯಾನೇಜಮೆಂಟ್, ಆರ್ಕಿಟೆಕ್ಟ್, ಮೆಡಿಕಲ್ ಮತ್ತು ಡೆಂಟಲ್ ಕೋರ್ಸ್‌ಗಳಿಗೆ ಅನುಮೋದನೆ ಪಡೆದಿರುವುದನ್ನು ರಾಜ್ಯ ಸರ್ಕಾರ ಖಾತರಿಪಡಿಸಿದೆಯೇ; | ಉದ್ಭವಿಸುವುದಿಲ್ಲ. |
| ಈ) | ಹಾಗಿದ್ದಲ್ಲಿ, ಅನುಮೋದನೆ ಪಡೆದ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ಯಾವುವು? (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರಿ ವಿಶ್ವವಿದ್ಯಾಲಯಗಳು ಕೋರ್ಸುಗಳನ್ನು ಸಂದರ್ಭಾನುಸಾರ ಎ.ಐ.ಸಿ.ಟಿ.ಇ. ಅಥವಾ ಯುಜಿಸಿ ವಿನಿಯಮಗಳು ಹಾಗೂ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳ ಮಾರ್ಗಸೂಚಿಗಳು/ ಮಾನದಂಡಗಳನುಸಾರ ನಡೆಸ ಬೇಕಾಗುತ್ತದೆ.<br><br>ಅದೇ ರೀತಿಯಲ್ಲಿ, ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಖಾಸಗಿ ವಿಶ್ವವಿದ್ಯಾಲಯಗಳು ನಡೆಸುವ ಎಲ್ಲಾ ಕೋರ್ಸುಗಳು ಆಯಾ ಅಧಿನಿಯಗಳಲ್ಲಿ ಗೊತ್ತುಪಡಿಸಿದಂತೆ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳ ವಿನಿಯಮಗಳಿಗೆ ಹಾಗೂ ಮಾನದಂಡಗಳಿಗೆ ಅನುಗುಣವಾಗಿರಬೇಕಾಗುತ್ತದೆ. |

ಸಂಖ್ಯೆ: ಇಡಿ 277 ಯುಆರ್‌ಸಿ 2018

(ಜಿ.ಟಿ. ದೇವೇಗೌಡ)
ಉನ್ನತ ಶಿಕ್ಷಣ ಸಚಿವರು